ದಿನಾಂಕಃ 04-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ವಾದಿ ಪರ ವಕೀಲರಿಂದ,

1) ನಾನು 9 ನೇ ತರಗತಿಯವರೆಗ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಆದರೆ, ಆಂಗ್ಲ ಭಾಷೆ ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿರುತ್ತದೆ. ಪ್ರಮಾಣ ಪತ್ರವನ್ನು ತಯಾರು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು ಪ್ರತಿವಾದಿಗಳ ಮನೆಯ ಪಕ್ಕದಲ್ಲಿ ವಾಸವಾಗಿರುವುದರಿಂದ ನನಗೆ ಮಾಹಿತಿ ಗೊತ್ತಿರುತ್ತದೆ. ನನಗೆ ಚಂದ್ರಶೇಖರ ರವರು ಸಾಕ್ಷಿ ನುಡಿಯಲು ಕರೆದಿರುತ್ತಾರೆ. ಚಂದ್ರಶೇಖರ ರವರು 2 ನೇ ಪ್ರತಿವಾದಿಗೆ ಭಾವ ಆಗಬೇಕು.

2) ನಾನು ಪುಟ್ಟಸ್ವಾಮಯ್ಯ ರವರನ್ನು ನೋಡಿರುತ್ತೇನೆ. ಪುಟ್ಟಸ್ವಾಮಯ್ಯ ರವರು ತೀರಿಕೊಂಡಾಗ ನನಗೆ 12 ವರ್ಷ ವಯಸ್ಸು ಆಗಿತ್ತು. ಪುಟ್ಟಸ್ವಾಮಯ್ಯ ರವರು ನನಗೆ ಯಾವುದೇ ರೀತಿಯ ಮಾಹಿತಿ ನೀಡಿರುವುದಿಲ್ಲ. ಸದರಿ ರವರು ತಮ್ಮ ಕುಟುಂಬದ ಬಗ್ಗೆ ಚರ್ಚೆ ಮಾಡುತ್ತಿರಲಿಲ್ಲ. ದಾವಾ ಸರ್ವೇ ನಂಬರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ದಾವಾ ಸ್ವತ್ತಿನ ಬಗ್ಗೆ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. 2 ನೇ ಪ್ರತಿವಾದಿ ಮತ್ತು ನಾನು ಅಕ್ಕ ಪಕ್ಕದ ಮನೆಯವರು. 2 ನೇ ಪ್ರತಿವಾದಿ ತನ್ನ ಕುಟುಂಬದ ಬಗ್ಗೆ ನನ್ನ ಜೊತೆ ಚರ್ಚೆ ಮಾಡುವುದಿಲ್ಲ. 2 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ಆದರೆ,ಆದಾಯ ಬರುವಂತಹ ಯಾವುದೇ ಕೆಲಸವನ್ನು ಮಾಡುವುದಿಲ್ಲ.

3) ದಾವಾ ಸ್ವತ್ತು ಮೂಲತಹ ಪುಟ್ಟಸ್ವಾಮಯ್ಯ ರವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ಪುಟ್ಟಸ್ವಾಮಯ್ಯ ರವರ ಮಕ್ಕಳಿಗೆ ಅವರ ಸೇರಿದ ಆಸ್ತಿಗಳಲ್ಲಿ ಹಕ್ಕು ಇರುತ್ತದೆ. ಪುಟ್ಟಸ್ವಾಮಯ್ಯ ರವರ ಜೀವಂತ ಅವಧಿಯಲ್ಲಿ ಅಥವಾ ನಂತರದ ಅವಧಿಯಲ್ಲಿ

ಅವರ ಕುಟುಂಬ ಸದಸ್ಯರ ನಡುವೆ ನೋಂದಾಯಿತ ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆದರೆ ವಿಭಾಗ ಆಗಿರುತ್ತದೆ ಎಂದು ಬೇರೆಯವರು ಹೇಳುತ್ತಿದ್ದರು. ಸದರಿ ವಿಭಾಗ ಸುಮಾರು 25 ವರ್ಷಗಳ ಹಿಂದೆ ಆಗಿರಬಹುದು ಆದರೆ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ವಿಭಾಗ ಆಗಿದೆ ಎಂದು 3 ನೇ ಪ್ರತಿವಾದಿ ತಿಳಿಸಿರುತ್ತಾರೆ. ವಿಭಾಗ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ.

4) ನಾನು 1 ನೇ ಪ್ರತಿವಾದಿಯ ಜೊತೆ ಅವರ ಜೀವಂತ ಅವಧಿಯಲ್ಲಿ ಮಾತುಕತೆ ಮಾಡುತ್ತಿದ್ದೆ. 1 ನೇ ಪ್ರತಿವಾದಿ ಮರಣ ಶಾಸನ ಬರೆಯುವ ಕಾಲಕ್ಕೆ ನಾನು ಹಾಜರಿರುವುದಿಲ್ಲ. ಮರಣ ಶಾಸನವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪುಟ್ಟಸ್ವಾಮಯ್ಯ ರವರು ತನ್ನ ಮಕ್ಕಳಿಗೆ ಯಾವ ಆಸ್ತಿಗಳನ್ನು ಯಾರಿಗೆ ಕೊಟ್ಟಿದ್ದರು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 3 ನೇ ವಾರಸುದಾರರು ದಾವಾ ಸ್ವತ್ತುಗಳಲ್ಲಿ ನಮಗೆ ಭಾಗ ಬೇಡ ಎಂದು ನನಗೆ ಹೇಳಿರುವುದಿಲ್ಲ. ನಾನು ಸಾಕ್ಷಿ ನುಡಿಯುವ ಮುಂಚೆ 2 ನೇ ಪ್ರತಿವಾದಿಯನ್ನು ಮಾತನಾಡಿಸಿರುವುದಿಲ್ಲ. ಅದೇರೀತಿ ವಾದಿಯನ್ನು ಮಾತನಾಡಿಸಿರುವುದಿಲ್ಲ. 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ಇತರೇ ಪಕ್ಷಗಾರರನ್ನು ನಾನು ಮಾತನಾಡಿಸಿರುವುದಿಲ್ಲ. ವಾದಿಗಳ ಕುಟುಂಬದಲ್ಲಿ ಭಾಗ ಆಗಿದೆ ಎಂದು 3 ನೇ ಪ್ರತಿವಾದಿ ನನಗೆ ಹೇಳಿರುತ್ತಾರೆ. ಆ ಸಮಯದಲ್ಲಿ ನಾನು ಹಾಜರಿರುವುದಿಲ್ಲ. ಪುಟ್ಟಸ್ವಾಮಯ್ಯ ರವರ ಕುಟುಂಬಕ್ಕೆ ಎಷ್ಟು ಆಸ್ತಿ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ಅಕ್ಕ ಪಕ್ಕದ ಮನೆಯವರಾಗಿದ್ದ ಕಾರಣ ಅನ್ಯೋನ್ಯವಾಗಿರುತ್ತೇವೆ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ